ದಿನಾಂಕ:17-09-2018 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸ.ಸ. ಅ.ರವರಿಂದಃ

1ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವುದಾಗಿ ಸಾಕ್ಷಿ ಗುರುತಿಸಿದ್ದಾರೆ. ಆರೋಪಿತರನ್ನು ದಸ್ತಗಿರಿ ಮಾಡಿದ ಬಳಿಕ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ವಿಚಾರಿಸಿದ್ದಾರೆ. ಆರೋಪಿತರು ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲನ್ನು ಠಾಣೆಯಲ್ಲಿ ನೋಡಿದ ಬಗ್ಗೆ ನನಗೆ ಸರಿಯಾಗಿ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ. ಅ.ರವರಿಂದಃ

ಆರೋಪಿತರು ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲ್‌ನ ಸಂಖ್ಯೆ ಕೆಎ20ಇಎಫ್6774ನ್ನು ನಾನು ಠಾಣೆಯಲ್ಲಿ ನೋಡಿದ್ದೇನೆ ಎಂದರೆ ಸರಿ . 1ನೇ ಆರೋಪಿಯು ಸುಲಿಗೆ ಮಾಡಿದ ಸರವನ್ನು ತನ್ನ ಸಂಬಂಧಿಯಾದ ಶಾರದರವರ ಮೂಲಕ ಕಟಪಾಡಿ ಸಹಕಾರಿ ವ್ಯವಸಾಯ ಸಂಘದಲ್ಲಿ ಅಡವು ಇಟ್ಟ ಕುರಿತು ನನಗೆ ಪೋಲಿಸರು ತಿಳಿಸಿದ್ದಾರೆ ಎಂದರೆ ಸರಿ . ಆರೋಪಿತರು ಕೃತ್ಯದ ವೇಳೆ ನನ್ನ ಚಿನ್ನದ ಸರವನ್ನು ಎಳೆದಾಗ ಕುತ್ತಿಗೆಯ ಬಳಿ ಮತ್ತು ಎಡ ಕಾಲಿಗೆ ಗಾಯವಾಗಿದ್ದು ಆ ಬಗ್ಗೆ ನಾನು ತೆಕ್ಕಟ್ಟೆಯ ಖಾಸಗಿ ವೈಧ್ಯರ ಬಳಿ ಚಿಕಿತ್ಸೆ ಪಡೆದಿದ್ದೇನೆ ಎಂದರೆ ಸರಿ .

ಪಾಟೀ ಸವಾಲುಃ ಶ್ರೀ ಬಿ.ಆರ್.ಎನ್ ವಕೀಲರಿಂದಃ

ತಕ್ಷೀರಿನ ಪೂರ್ವದಲ್ಲಿ ಆರೋಪಿತರ ಪರಿಚಯ ನನಗೆ ಇತ್ತು. ಘಟನೆ ನಡೆದಿದೆ ಎಂಬ ಸಮಯದಲ್ಲಿ ಸಂಪೂರ್ಣವಾಗಿ ಕತ್ತಲೆ ಇತ್ತು. ಆ ಕಾಲಕ್ಕೆ ನಾನು ನನ್ನ ಅಂಗಡಿಯನ್ನು ಮುಚ್ಚಿದ್ದೆ.

ತಕ್ಷೀರಿನ ಸ್ಥಳದಲ್ಲಿ ಯಾವುದೇ ಬೆಳಕಿನ ವ್ಯವಸ್ಥೆ ಇರಲಿಲ್ಲ. ನನ್ನ ಅಂಗಡಿಯಿಂದ ಮತ್ತು ಮನೆಯಿಂದ ಕೋಟ ಪೋಲಿಸ್ ಠಾಣೆಗೆ ಸುಮಾರು 3 ಕಿ.ಮೀ ದೂರ ಇದೆ. ನನ್ನ ಬಳಿ ತಕ್ಷೀರಿನ ಕಾಲಕ್ಕೆ ದ್ವಿಚಕ್ರ ವಾಹನ ಇತ್ತು. ತಕ್ಷೀರಿನ ಬಳಿದ ನಾನು ನನ್ನ ದ್ವಿಚಕ್ರ ವಾಹನದಲ್ಲಿಯೇ ಮನೆಗೆ ಹೋಗಿದ್ದೇನೆ. ಮನೆಗೆ ಹೋಗಿ ಮಕ್ಕಳ ಬಳಿ ಘಟನೆಯ ಬಗ್ಗೆ ಚರ್ಚಿಸಿ ಬಳಿಕ ವೈಧ್ಯರ ಬಳಿ ರಾತ್ರಿ **10-30** ರ ಸಮಯದಲ್ಲಿ ಚಿಕಿತ್ಸೆಗೆ ಹೋಗಿದ್ದೇನೆ. ಸದರಿ ಚಿಕಿತ್ಸೆಯನ್ನು ನಾನು ಕ್ಲಿನಿಕ್‌ನಲ್ಲಿ ಪಡೆದಿದ್ದೇನೆ. ಸದರಿ ಕ್ಲಿನಿಕ್ ನಿಗಧಿತ ಸಮಯದಲ್ಲಿ ಮಾತ್ರ ತೆರೆದಿರುತ್ತದೆ ಎಂದರೆ ಸರಿ . ಸದರಿ ಕ್ಲಿನಿಕ್‌ನಲ್ಲಿ ಕೆಲಸದ ಅವಧಿಯನ್ನು ನಾಮ ಫಲಕದಲ್ಲಿ ನಮೂದಿಸಲಾಗಿದೆ. ಸುಲಿಗೆಯ ಘಟನೆಯ ಬಗ್ಗೆ ವೈಧ್ಯರಿಗೆ ನಾನು ಹೇಳಿದ್ದೇನೆ. ವಾಹನದಿಂದ ಬಿದ್ದು ಗಾಯವಾಗಿದೆ ಎಂದು ನಾನು ವೈಧ್ಯರಿಗೆ ಹೇಳಿದ್ದೇನೆ. ರಾತ್ರಿ **11-30** ರ ಸಮಯಕ್ಕೆ ನಾನು ಚಿಕಿತ್ಸೆ ಪಡೆದು ಮನೆಗೆ ಹಿಂದಿರುಗಿದ್ದೇನೆ.

ನನ್ನ ಮಕ್ಕಳ ಪೈಕಿ ಒಬ್ಬ ಮಗ ರಿಕ್ಷಾ ಚಾಲಕನಾಗಿದ್ದು , ಇನ್ನೊಬ್ಬ ಹೊಲಿಗೆ ಮೆಶೀನನ್ನು ರಿಪೇರಿಯನ್ನು ತಕ್ಷೀರಿನ ಕಾಲಕ್ಕೆ ಮಾಡುತ್ತಿದ್ದರು. ಅವರಿಬ್ಬರು ನನ್ನೊಂದಿಗೆ ವೈಧ್ಯರ ಬಳಿ ಬಂದಿದ್ದರು. ನನ್ನ ಮಗನ ರಿಕ್ಷಾದಲ್ಲಿಯೇ ನಾನು ಚಿಕಿತ್ಸೆಗೆ ಹೋಗಿದ್ದೆ. ನನ್ನ ಮನೆಯಿಂದ ವೈಧ್ಯರ ಕ್ಲಿನಿಕ್‌ಗೆ 2 ಕಿ.ಮೀ ಅಂತರ ಇದೆ. ತಕ್ಷೀರಿನ ಕಾಲಕ್ಕೆ ನನ್ನ ಮಕ್ಕಳ ಬಳಿ ಚರ ದೂರವಾಣಿ ಇತ್ತು. ತಕ್ಷೀರು ನಡೆದ ಕೂಡಲೇ ಠಾಣೆಗೆ ದೂರವಾಣಿ ಮೂಲಕ ಮಾಹಿತಿ ನೀಡಲು ಅಥವಾ ಠಾಣೆಗೆ ಖುದ್ದು ಹೋಗಿ ಮಾಹಿತಿ ನೀಡಲು ಯಾವುದೇ ತೊಂದರೆ ಇರಲಿಲ್ಲ.

ದೂರನ್ನು ನನ್ನ ಮಗ ಠಾಣೆಯಲ್ಲಿ ಬರೆದು ನೀಡಿದ್ದಾರೆ. ದೂರನ್ನು ಬರೆಯಲು ಯಾರು ಅನುಭವ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದೂರಿಗೆ ನಾನು ಸಹಿ ಮಾಡಿದ್ದೇನೋ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಆ ದೂರಿನಲ್ಲಿ ಬರೆದ ವಿಚಾರಗಳನ್ನು ನನಗೆ ಈಗ ಹೇಳಲು ಸಾಧ್ಯವಿಲ್ಲ. ದೂರು ನೀಡಿದ ಒಂದುವರೆ ತಿಂಗಳ ವರೆಗೆ ನಾನು ಪೋಲಿಸ್ ಠಾಣೆಗೆ ಹೋಗಿ ವಿಚಾರಿಸಿಲ್ಲ. ಆ ಬಳಿಕ ಪೋಲಿಸರು ನನ್ನ ಅಂಗಡಿಗೆ ಬಂದು ಆರೋಪಿತರನ್ನು ಹಿಡಿದಿದ್ದೇವೆ ಎಂದು ತಿಳಿಸಿದರು. ದೂರು ನೀಡುವ ಕಾಲಕ್ಕೆ ನನ್ನ ಮಕ್ಕಳ ಬಳಿ ಇಬ್ಬರು ವ್ಯಕ್ತಿಗಳು ಮುಸುಕು ಧರಿಸಿಕೊಂಡು ಬಂದು ಕೃತ್ಯ ಎಸಗಿದ್ದಾರೆಂದು ಹೇಳಿದ್ದೇನೆ. ಆದ್ದರಿಂದ ಆ ವ್ಯಕ್ತಿಗಳನ್ನು ಗುರುತಿಸಲು ಆಗಿಲ್ಲವೆಂದು ಪೋಲಿಸರಿಗೆ ಕೂಡ ತಿಳಿಸಿದ್ದೇನೆ ಎಂದರೆ ಸರಿ .

ನಾನು ಧರಿಸಿದ್ದ ಚಿನ್ನದ ಸರ ಹುಕ್ಕಿನ ಬಳಿ ತುಂಡಾಗಿತ್ತು. ನ್ಯಾಯಾಲಯದಿಂದ ಆ ಸರವನ್ನು ಪಡೆದುಕೊಂಡ ಬಳಿಕ ಕೊಂಡಿ ಹಾಕಿ ಸರಿ ಮಾಡಿಸಿಕೊಂಡಿದ್ದೇನೆ. ದೂರು ನೀಡುವ ಕಾಲಕ್ಕೆ ನಾನು

ಗಡಿಬಿಡಿಯಲ್ಲಿ ಸದರಿ ಚಿನ್ನದ ಸರದ ತೂಕ 12 ಗ್ರಾಂ ಎಂದು ಹೇಳಿದ್ದೆ. ಆದರೆ ಅದರ ತೂಕ 8 ಗ್ರಾಂ ಆಗಿತ್ತು. ಸರ ಸಿಕ್ಕಿದ ಬಳಿಕ ಸದರಿ ಸರದ ತೂಕ 8 ಗ್ರಾಂ ಎಂದು ನನಗೆ ತಿಳಿಯಿತು. ದೂರು ನೀಡಿದ ಬಳಿಕ ನಾನು ಸರ ಸಿಕ್ಕಿದ ಬಳಿಕ ಒಮ್ಮೆ ಪೋಲಿಸ್ ಠಾಣೆಗೆ ಹೋಗಿದ್ದೇನೆ. ಪೋಲಿಸ್ ಠಾಣೆಯಲ್ಲಿ ಸರವನ್ನು ಗುರುತಿಸಿ ಹಿಂದಿರುಗಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿತರನ್ನು ನನಗೆ ಪೋಲಿಸರು ತೋರಿಸಿದ್ದಾರೆ. ಆ ಆಧಾರದಲ್ಲಿ ಆರೋಪಿತರು ಕೃತ್ಯ ಎಸಗಿದ್ದಾರೆಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿ .

ಠಾಣೆಯಿಂದ ಚಿನ್ನದ ಸರವನ್ನು ತರಲು ಹೋದಾಗ ನಾನು ಸಹಿ ಮಾಡಿದ್ದೇನೆ. ನಿಪಿ2 ಮತ್ತು 3ಕ್ಕೆ ನಾನು ಆ ಸಮಯದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ . ಚಾಸಾ12 ರವರನ್ನು ಪೋಲಿಸರು ಕರೆಸಿ ಸಹಿ ಪಡೆದಿದ್ದಾರೆ . ನಿಪಿ4 ರಲ್ಲಿ ಗೂಡಂಗಡಿ ಕಾಣಿಸುವುದಿಲ್ಲ ಎಂದರೆ ಸರಿ . ಪೋಲಿಸರು ನನ್ನನ್ನು ಒಂದು ಸ್ಥಳದಲ್ಲಿ ನಿಲ್ಲಿಸಿ ನಿಪಿ4 ರ ಛಾಯಚಿತ್ರ ತೆಗೆದಿದ್ದಾರೆ ಎಂದರೆ ಸರಿಯಲ್ಲ. ತಕ್ಷೀರಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಡವು ಇಟ್ಟದ್ದಾರೆ ಎಂಬ ಬ್ಯಾಂಕಿಗೆ ನಾನು ಹೋಗಿಲ್ಲ. ಪೋಲಿಸರು ಹೇಳಿದ ಮೇರೆಗೆ ಅಡವಿನ ಕುರಿತ ವಿಚಾರಗಳನು ಹೇಳುತ್ತಿದ್ದೇನೆ ಎಂದರೆ ಸರಿ . ಪೋಲಿಸರು ಹೇಳಿದ ವಿಚಾರಗಳನ್ನು ಅರ್ಥಾಂಭರ್ದ ತಿಳಿದುಕೊಂಡು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರು ನೀಡಿದ ಬಳಿಕ ನಾನು ಯಾವುದೇ ಲಿಖಿತ ಹೇಳಿಕೆಯನ್ನು ಪೋಲಿಸರಿಗೆ ನೀಡಿಲ್ಲ ಎಂದರೆ ಸರಿ .

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಕುಂದಾಪುರ